# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1196 |
| ಸದಸ್ಯರ ಹೆಸರು | ಶ್ರೀ ಶಿವಕುಮಾರ್ ಕೆ. |
| ಉತ್ತರಿಸುವ ದಿನಾಂಕ | 17.12.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆ ಗಾಣಗಾಪುರದ ಅಮರ್ಜಾ ನದಿ ಸಂಗಮ ತೀರದ ತಟದಲ್ಲಿರುವ ದತ್ತ ಪಾದ ಪೀಠ ಕ್ಷೇತ್ರವು ಮುಜರಾಯಿ ಇಲಾಖೆಗೆ ಒಳಪಟ್ಟಿದೆಯೇ; ಒಳಪಟ್ಟಿದ್ದಲ್ಲಿ ಇಲ್ಲಿ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ; | ಕಲಬುರಗಿ ಜಿಲ್ಲೆ ಗಾಣಗಾಪುರದ ಅಮರ್ಜಾ ನದಿ ಸಂಗಮ ತೀರದ ತಟದಲ್ಲಿರುವ ದತ್ತ ಪಾದ ಪೀಠ ಕ್ಷೇತ್ರವು ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿರುತ್ತದೆ. ಶ್ರೀ ಕ್ಷೇತ್ರ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ತಯಾರಿಸಲಾಗಿದೆ. |
| ಆ) | ಲಕ್ಷಾಂತರ ಭಕ್ತಾದಿಗಳು ಈ ಕ್ಷೇತ್ರಕ್ಕೆ ದಿನನಿತ್ಯ ಬರುವುದರಿಂದ ಇಲ್ಲಿ ಚಾಮುಂಡೇಶ್ವರಿ ದೇವಾಲಯ ಅಥವಾ ಮಲೆ ಮಹದೇಶ್ವರ ದೇವಸ್ಥಾನದ ಮಾದರಿಯಂತೆ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರದ ಮುಂದಿದೆಯೇ; | ಪ್ರಸ್ತುತ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಗಾಣಗಾಪುರದ ಶ್ರೀ ಕ್ಷೇತ್ರ ಶ್ರೀ ದತ್ತಾತ್ರೇಯ ದೇವಸ್ಥಾನದ ಹಾಗೂ ಭೀಮಾನದಿ ತೀರದಲ್ಲಿರುವ ಸಂಗಮ ಸ್ಥಾನದ ಸರ್ವತೋಮುಖ ಅಭಿವೃದ್ಧಿ ಮಾಡುವ ಸಲುವಾಗಿ ಸುಮಾರು ರೂ.200 ಕೋಟಿ ವೆಚ್ಚದಲ್ಲಿ ಮಾಸ್ಟರ್ ಪ್ಲಾನ್ ತಯಾರಿಸಲಾಗಿದೆ.<br><br>ಮೊದಲ ಹಂತದಲ್ಲಿ ರೂ.83.52 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲು "Pilgrimage Rejuvenation and Spiritual Augmentation Drive – (PRASAD)" ಯೋಜನೆ ಅಡಿಯಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>(ಪ್ರತಿ ಲಗತ್ತಿಸಿದೆ) |
| ಇ) | ಇಲ್ಲಿರುವ ರಸ್ತೆ ಬದಿಯ ಅಂಗಡಿಗಳನ್ನು ತೆರವುಗೊಳಿಸಿ ಬೇರೆಡೆಗೆ ಸ್ಥಳಾಂತರಿಸಲಾಗುವುದೇ; | ಇಲ್ಲಿರುವ ರಸ್ತೆ ಬದಿಯ ಅಂಗಡಿಗಳು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಈಗಾಗಲೇ ಒಂದೆರಡು ಬಾರಿ ಜಿಲ್ಲಾಡಳಿತ/ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ದಿನಾಂಕ:08.06.2025ರಂದು ತೆರವುಗೊಳಿಸಲಾಗಿರುತ್ತದೆ. ವ್ಯಾಪಾರಿಗಳು ರಸ್ತೆಬದಿ ಅಂಗಡಿಗಳನ್ನಿಡುವುದನ್ನು ಪುನರಾವರ್ತಿಸುತ್ತಿರುವುದರಿಂದ ಸದರಿಯವರನ್ನು ತೆರವುಗೊಳಿಸಲು ಜಿಲ್ಲಾಡಳಿತದ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಅಂಗಡಿಗಳರವರನ್ನು ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಬಹುತೇಕ ಇಲ್ಲಿ ಬುದ್ಧಿಮಾಂದ್ಯ ಮಕ್ಕಳನ್ನು ಅವರ ಪಾಲಕರು ಕರೆತಂದು 2 ರಿಂದ 3 ದಿನಗಳ ಕಾಲ ವಾಸ್ತವ್ಯ ಮಾಡುವುದರಿಂದ ಇವರಿಗೆ ಸರ್ಕಾರದಿಂದ ವಸತಿ ವ್ಯವಸ್ಥೆಯನ್ನು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ? | ಶ್ರೀ ದತ್ತಾತ್ರೇಯ ದೇವಾಲಯದಲ್ಲಿ ವಾಸ್ತವ್ಯ ಹೂಡುವ ಬುದ್ಧಿಮಾಂದ್ಯರು ಮತ್ತು ಅವರ ಪಾಲಕರ ವಾಸ್ತವ್ಯಕ್ಕಾಗಿ ದೇವಸ್ಥಾನದ ವತಿಯಿಂದ ಪತ್ರಾಶೆಡ್ (ಲೋಹದ ಶೀಟ್‌ಗಳಿಂದ ನಿರ್ಮಿಸಲಾದ ಶೆಡ್) ನಿರ್ಮಾಣ ಮಾಡಿ ಅನುಕೂಲ ಕಲ್ಪಿಸಲಾಗಿದ್ದು, ಶಾಶ್ವತವಾಗಿ ಕಟ್ಟಡವನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.<br><br>ಅಲ್ಲದೆ ದತ್ತಾತ್ರೇಯ ದೇವಸ್ಥಾನದ ಅಧೀನದಲ್ಲಿ ಬರುವ ಶ್ರೀ ತಂತುಕೇಶ್ವರ ದೇವಾಲಯದ ಜಾಗದಲ್ಲಿ ಅನ್ನದಾಸೋಹ ಭವನವನ್ನು ನಿರ್ಮಿಸಲು ಅನುಮತಿ ನೀಡಲಾಗಿರುತ್ತದೆ. |

ಸಂಖ್ಯೆ: ಕಂಇ 222 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

LC-1196

**SALMA K FAHIM, IAS**
Secretary to Government
Tourism Department

Karnataka
One state. Many worlds.

D.O.No. TOR/119/TDP/2023

Date:29-10-2024.

Dear Madam,

**Subject:** Proposal for development of Shri Dattatreya Temple, Ganagapura, Afzalupra Talluk, Kalaburagi District in Karnataka under PRASHAD Scheme of Ministry of Tourism, Govt. of India.

*******

With reference to the above subject, the Department of Tourism (DoT), Government of Karnataka has received a proposal from the Deputy Commissioner and President, District Tourism Development Committee, Kalaburagi District for development of "Sri Dattatreya Temple, Ganagapura, Afzalpur taluk, Kalaburagi District in Karnataka under PRASHAD Scheme of Ministry of Tourism, Government of India .

The proposed components include Parking, CCTV, Solar Panels, Information centre, Prasada Counter, multipurpose hall, first aid, clock room, waiting room, Ghat development, toilet blocks, drinking water, shoe stand, rain water harvesting, signages, Sangama development, and Asta Teertha development etc at an estimated cost of Rs. 83.52 Crore. The proposed project shall aid in the comprehensive development of "Sri Dattatreya Temple, Ganagapura", from a holistic perspective along with the required infrastructure interventions. The concept presentation and line estimate is enclosed with this letter for your perusal and further action.

We request the Ministry of Tourism, Government of India to consider the development of "Sri Dattatreya Temple, Ganagapura", under PRASHAD Scheme.

We look forward to your approval and successful implementation of the proposed project. Karnataka shall benefit from the support of the Government of India, and we look forward to collaborating with Ministry of Tourism for the development of our destinations and creating improved socio-economic opportunities for the people of the State.

With kind regards,

Yours sincerely,

Sd/-

Sri Suman Billa, IAS,
Additional Secretary,
Ministry of Tourism,
Government of India,
Transport Bhavan,
#1, Parliament Street,
New Delhi-110 001



Room No. 5, Ground Floor, Vikasa Soudha, Bengaluru - 560 001, Karnataka, India.
Tel : +91 80 22253482 | 22034007 | Email : ...kar@gmail.com | Website: www.karnatakatourism.org

File No. RD/222/MSPA/2025-MUZ-REVENUE DEPATMENT SEC (Computer No. 1990523)
Generated from eOffice by SUGUNA S, RD-MUZ-SO(SU), SECTION OFFICER, REVENUE DEPARTMENT SEC on 10/12/2025 11:48 AM